# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

2

ಇಲಾಖೆ / ವಿಷಯ : DEPARTMENT / SUBJECT: ಸಭಾಪತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 26/2/2021




ಚಿತ್ರದುರ್ಗದ ಮುರುಘಾಮಠದಲ್ಲಿ ಗುರುವಾರ ಡಾ.ಶಿವಮೂರ್ತಿ ಮುರುಘಾ ಶರಣರು ವಿಧಾನ ಪರಿ ಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಸನ್ಮಾನಿಸಿದರು. ಹನುಮಲಿ ಷಣ್ಮುಖಪ್ಪ, ಡಾ.ಕರಿ ಯಪ್ಪ ಮಾಳಿಗೆ ಇತರರು ಭಾಗವಹಿಸಿದ್ದರು.

# 'ಚಿಂತಕರ ಚಾವಡಿ' ಪುನರ್ವಸತಿ ಕೇಂದ್ರ

ಚಿತ್ರದುರ್ಗ: ಚಿಂತಕರ ಚಾವಡಿ ಎಂಬುದು ಸೋತವರ, ರಾಜಕೀಯ ಪುಢಾರಿಗಳ ಪುನರ್ವಸತಿ ಕೇಂದ್ರವಾಗಿದೆ. ಈಗಾಗಲೇ ವಿಧಾನಪರಿತಷ್‌ನ ಘನತೆ ಗೌರವ ಕಾಪಾಡಲು ಸಹಕಾರ ನೀಡುವಂತೆ ಮನವಿ ಮಾಡಿರುವೆ. ಒಂದು ವೇಳೆ ಸಹಕಾರ ನೀಡದಿದ್ದರೆ ತಮ್ಮ ಅಧಿಕಾರ ಚಲಾಯಿಸಿ ದೇಶದಲ್ಲಿ 'ಶ್ರೇಷ್ಟ ಸಭಾಪತಿ' ಎನ್ನುವಂತೆ ಕಾರ್ಯಭಾರ ಮಾಡುವುದಾಗಿ ವಿಧಾನಪರಿಷತ್ ಸಭಾಪತಿ ಬಸವ ರಾಜ ಹೊರಟ್ಟಿ ಹೇಳಿದರು.

ನಗರದ ಮುರುಘಾಮಠದಲ್ಲಿ ಗುರುವಾರ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು. ವಿಧಾನ ಪರಿಷತ್ ಎಂದರೆ ಅದೊಂದು ದೇವಸ್ಥಾನ ಇದ್ದಂತೆ. ಅದನ್ನು ಅಪವಿತ್ರಗೊಳಿಸಲು ಅವಕಾಶ ನೀಡುವುದಿಲ್ಲ. ಇತ್ತೀಚೆಗೆ ನಡೆದ ಘಟನೆ ಅತ್ಯಂತ ನೋವು ತಂದಿದೆ. ಇದರ ಬಗ್ಗೆ ಯಾರೂ ಏನು ಹೇಳಲಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡಲಿಲ್ಲ. ಈಗಾ-ಗಲೇ ಸಿಎಂ ಹಾಗೂ ಇತರರ ಸಭೆಯಲ್ಲಿ ಚಿಂತಕರ ಚಾವಡಿಯ ಗೌರವ ಕಾಪಾಡುವಂತೆ ಹೇಳಿ ದ್ದೇನೆ. ಸೋತವರನ್ನು, ಮಂತ್ರಿಯಾಗುವವರನ್ನು ಕರೆತರಬೇಡಿ ಎಂದು ಹೇಳಿದ್ದಕ್ಕೆ ಸಿಎಂ ತಲೆಯಾ ಡಿಸಿದ್ದಾರೆ. ಏನು ಮಾಡುತ್ತಾರೋ ಗೊತ್ತಿಲ್ಲ ಎಂದು ಸೂಚ್ಯವಾಗಿ ಹೇಳಿದರು.

ಪರಿಷತ್‌ನಲ್ಲಿ ಧಿಕ್ಕಾರ ಕೂಗುವುದು. ಅವಾಚ್ಯ ಶಬ್ದ ಬಳಕೆ ಮಾಡುವುದು ಸರಿ ಅಲ್ಲ. ಫೆಬ್ರವರಿ 4ರಿಂದ ಪರಿಷತ್ ಘನತೆ ಕಾಪಾಡುವ ನಿಯಮವನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲಾಗಿದೆ. ಮೂರು ಪಕ್ಷದ ಐವರು ಸೇರಿದಂತೆ ಪ್ರಮುಖರ ಸಭೆ ಕರೆದು ಘನತೆ ಕಾಪಾಡಲು ಸಹಕಾರ ನೀಡುವಂತೆ ಕೋರುತ್ತೇನೆ. ಒಂದು ವೇಳೆ ಸಹಕಾರ ಕೊಡದಿದ್ದರೆ ಸಭಾಪತಿ ಅಧಿಕಾರ ತೋರಿಸುತ್ತೇನೆ ಎಂದು ಅವರು ಎಚ್ಚರಿಕೆ ನೀಡಿದರು.

ರಾಜ್ಯಪಾಲರ ನಂತರ ಅತ್ಯಂತ ಶ್ರೇಷ್ಟ ಹುದ್ದೆ ಸಭಾಪತಿ. ಆದರೆ ಶಿಷ್ಟಾಚಾರ ಪಾಲನೆ ಬಹಳ ಕಷ್ಟ. ಸಿಎಂ, ಮಂತ್ರಿಯನ್ನು ಭೇಟಿ ಮಾಡುವಂತಿಲ್ಲ. ಸಮಸ್ಯೆ ತರುವ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಬೇಕಾಗಿದೆ. ಈ ದಿಕ್ಕಿನಲ್ಲಿ ಪತ್ರ ಅಥವಾ ಮೊಬೈಲ್ ಮೂಲಕ ಸೂಚನೆ ನೀಡಿದರೂ ಕೆಲವು ಸಾರಿ ಕೆಲಸವಾಗುವುದಿಲ್ಲ. ಇದಕ್ಕಾಗಿ ಇಬ್ಬರನ್ನು ನೇಮಿಸಿ ಜನರ ಕೆಲಸ ಮಾಡಿಸಿಕೊಡಲು ಚಿಂತನೆ ನಡೆಸಲಾಗಿದೆ ಎಂದರು.

ಡಾ.ಶಿವಮೂರ್ತಿ ಮುರುಘಾಶರಣರು, ಡಾ.ಕರಿಯಪ್ಪ ಮಾಳಿಗೆ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯಕಾರಿ ಸದಸ್ಯರಾದ ಮಲ್ಲಿಕಾರ್ಜುನ ಸ್ವಾಮಿ, ಷಣ್ಮುಖಪ್ಪ, ಹನುಮಲಿ ಷಣ್ಮುಖಪ್ಪ ಇತರರು ಭಾಗವಹಿಸಿದ್ದರು.